# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ    Kannada Daily

ಹಾಸನ    E-mail : kannadapostnews@gmail.com    / ಕನ್ನಡ post    Price: ₹1

Vol.No.01 | Issue. 227 | Pages. 2 | Date: 20-07-2025, SUNDAY    RNI NO: KARKAN/2024/89601

ಸಂಪುಟ : 01 - ಸಂಚಿಕೆ : 227 - ಪುಟಗಳು : 2 - 20 ಜುಲೈ 2025 ಭಾನುವಾರ    Ph: 8762954248    ದರ : ₹1


# ಅನ್ನಭಾಗ್ಯ ಅಕ್ಕಿ ಅಧಿಕ: ಪರ್ಯಾಯ ಪದಾರ್ಥಕ್ಕೆ ಚಿಂತನೆ

## ಸಾರ್ವಜನಿಕ ಅಭಿಪ್ರಾಯ ಸಂಗ್ರಹಕ್ಕೆ ಡಿಸಿ ಸೂಚನೆ : ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಿದ್ಧತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅನ್ನಭಾಗ್ಯ ಯೋಜನೆಯಡಿ ಪಡಿತರ ಫಲಾನುಭವಿಗಳಿಗೆ 5 ಕೆ.ಜಿ. ಅಕ್ಕಿ ಬದಲು ಪರ್ಯಾಯ ಪದಾರ್ಥ ನೀಡುವ ಕುರಿತು ಮನವಿ ಬಂದಿದ್ದು ಈ ಸಂಬಂಧ ಅಧಿಕಾರಿಗಳು ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶನಿವಾರ ಏರ್ಪಡಿಸಿದ್ದ ಜನಸ್ಪಂದನ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಮಾತನಾಡಿದ ಅವರು, ಪಡಿತರದಾರರಿಗೆ ಪ್ರತಿತಿಂಗಳು 10 ಕೆ.ಜಿ. ಅಕ್ಕಿ ನೀಡಲಾಗುತ್ತಿದೆ. ಅದರ ಬದಲಿಗೆ 5 ಕೆ.ಜಿ. ಅಕ್ಕಿ ನೀಡಿ ಉಳಿದ 5 ಕೆ.ಜಿ. ಅಕ್ಕಿ ಬದಲಿಗೆ ಪರ್ಯಾಯ ಪದಾರ್ಥ ನೀಡುವಂತೆ ಮನವಿ ಸಲ್ಲಿಕೆಯಾಗಿವೆ. ಈ ನಿಟ್ಟಿನಲ್ಲಿ ಒಂದು ತಂಡ ರಚನೆ ಮಾಡಿ ಪ್ರತಿ ತಾಲ್ಲೂಕಿನ ಒಂದೊಂದು ಗ್ರಾಮ ಪಂಚಾಯಿತಿ ಆಯ್ಕೆ ಮಾಡಿಕೊಂಡು ಖುದ್ದು ಭೇಟಿ ನೀಡಿ ಸಾರ್ವಜನಿಕರ ಅಭಿಪ್ರಾಯ ಪಡೆದು ಸಮಗ್ರ ವರದಿ ತಯಾರಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಕೂಲವಾಗುತ್ತದೆ. ಅರ್ಹ ಬಡ ಕುಟುಂಬಗಳಿಗೆ ಪಡಿತರ ಪದಾರ್ಥ ದೊರಕಬೇಕು. ಈ ನಿಟ್ಟಿನಲ್ಲಿ ತಹಶೀಲ್ದಾರ್ ಖುದ್ದು ಭೇಟಿ ನೀಡಿ ಪರಿಶೀಲನೆ ಮಾಡಿ ಸವಲತ್ತು ಕಲ್ಪಿಸುವಂತೆ ಸೂಚಿಸಿದರು.




### ಕಟ್ಟಡ ಸುರಕ್ಷತೆ ಕಾಪಾಡಿ

ಸರ್ಕಾರಿ ಕಚೇರಿಗಳು ಸುರಕ್ಷಿತವಾಗಿರಬೇಕು. ಸಾರ್ವಜನಿಕರು ವಿವಿಧ ಕೆಲಸಗಳಿಗಾಗಿ ನಿತ್ಯ ಬರುವುದರಿಂದ ಕಟ್ಟಡಗಳ ನಿರ್ವಹಣೆ ಉತ್ತಮವಾಗಿರಬೇಕು. ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಶಾಲಾ ಕಟ್ಟಡಗಳ ದುರಸ್ತಿಗೆ ಗಮನ ಹರಿಸಬೇಕು. ಜೊತೆಗೆ ಸರ್ಕಾರಿ ಆಸ್ತಿ ಸರಂಕ್ಷಣೆಗೆ ಗಮನ ಹರಿಸಬೇಕು ಎಂದರು. ಮಳೆಗಾಲದಲ್ಲಿ ವಿದ್ಯುತ್ ತಂತಿಗಳ ಮೇಲೆ ಮರದ ಕೊಂಬೆ ರೆಂಬೆಗಳು ಬಿದ್ದು, ಅವಘಡಗಳು ಸಂಭವಿಸದಂತೆ ಎಚ್ಚರವಹಿಸಿ, ಅಂತಹವುಗಳನ್ನು ಕಡಿಯಲುಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರಲ್ಲದೆ, ಒಂದುತಂಡವಾಗಿ ಕೆಲಸ ಮಾಡಿದರೆ ಯಶಸ್ವಿಯಾಗಲು ಸಾಧ್ಯ ಎಂದು ತಿಳಿಸಿದರು.

ವಿದ್ಯುತ್ ಸಮಸ್ಯೆಗೆ ಸಂಬಂಧಿಸಿದಂತೆ ದೂರುಗಳಿದ್ದಲ್ಲಿ ಸಾರ್ವಜನಿಕರು 9448994922 ಕರೆ ಮಾಡಬಹುದಾಗಿದೆ. ತಮ್ಮ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಿರುವ ಕಂಬದಲ್ಲಿ ನಮೂದಿಸಿರುವ ಸಂಖ್ಯೆಯನ್ನು ದೂರು ನೀಡುವ ಸಂದರ್ಭದಲ್ಲಿ ತಿಳಿಸಿದರೆ ತಕ್ಷಣ ಬಂದು ಸೆಸ್ಕಾಂ ಸಿಬ್ಬಂದಿ ಸಮಸ್ಯೆ ಬಗೆಹರಿಸಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ಮಾತನಾಡಿ, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಅರ್ಜಿಗಳನ್ನು ನಿಗದಿತ ಅವಧಿಯೊಳಗೆ ವಿಲೇವಾರಿ ಮಾಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಮ್ಮಯ್ಯ, ಉಪ ವಿಭಾಗಾಧಿಕಾರಿಗಳಾದ ಶೃತಿ, ಮಾರುತಿ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

### ಸರ್ಕಾರಿ ಸವಲತ್ತು ಅರ್ಹರಿಗೆ ತಲುಪಲಿ

ಪೌತಿ ಖಾತೆ ಆಂದೋಲನದ ಜೊತೆಗೆ ಪಿಂಚಣಿ ಆಂದೋಲನ ನಡೆಸಿ ವಿವಿಧ ಯೋಜನೆಗಳಿಂದ ಕೈಬಿಟ್ಟು ಹೋಗಿರುವವರನ್ನು ಗುರುತಿಸಿ ಸರ್ಕಾರಿ ಸವಲತ್ತು ಕಲ್ಪಿಸಿಕೊಡುವ ಕೆಲಸ ಅಧಿಕಾರಿಗಳಿಂದ ಆಗಬೇಕು.

ಕೆರೆ, ಗೋಮಾಳ ಮತ್ತು ಸ್ಮಶಾನ ಒತ್ತುವರಿ ತೆರವುಗೊಳಿಸಲು ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕೆಂದು ಉಪವಿಭಾಗಾಧಿಕಾರಿಗೆ ಸೂಚಿಸಿದರು.

ದುರಸ್ತಿಗಾಗಿ ಸ್ವೀಕೃತವಾದ ಅರ್ಜಿಗಳಲ್ಲಿ ಅಗತ್ಯ ದಾಖಲೆಗಳು ಇಲ್ಲದಿದ್ದಲ್ಲಿ ಅಂತಹವುಗಳನ್ನು ಕಡತ ನಾಪತ್ತೆ ಸಮಿತಿಗೆ ವರ್ಗಾಯಿಸಬೇಕು. ಆಲೂರು ತಾಲ್ಲೂಕಿನ ಬಂಡಿ ತಿಮ್ಮನಹಳ್ಳಿಯ ವಿದ್ಯಾರ್ಥಿಗಳಿಗೆ ಸಾರಿಗೆ ಸಮಸ್ಯೆ ಇರುವ ಕುರಿತು ದೂರು ಬಂದಿದ್ದು ಮಕ್ಕಳಿಗೆ ತೊಂದರೆಯಾಗದಂತೆ ಕೆಎಸ್ಆರ್‌ಟಿಸಿ ಬಸ್ ವ್ಯವಸ್ಥೆ ಕಲ್ಪಿಸಬೇಕು ಎಂದರು.

ಜನ ಸ್ಪಂದನ ಸಭೆಯಲ್ಲಿ ಸ್ವೀಕೃತವಾಗಿರುವ ಒಟ್ಟು 140 ಅರ್ಜಿಗಳನ್ನು ಆದಷ್ಟೂ ಶೀಘ್ರವಾಗಿ ವಿಲೇವಾರಿ ಮಾಡಬೇಕು. ಪ್ರತಿ ತಿಂಗಳ ಮೊದಲ ಶನಿವಾರ ಕಡ್ಡಾಯವಾಗಿ ತಾಲ್ಲೂಕು ಮಟ್ಟದಲ್ಲಿ ಜನಸ್ಪಂದನ ಕಾರ್ಯಕ್ರಮ ಆಯೋಜಿಸಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ನಿಗದಿತ ಅವಧಿಯೊಳಗೆ ವಿಲೇವಾರಿಗೆ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದರು.

ಪ್ರತಿನಿತ್ಯ ದಿನಪತ್ರಿಕೆಗಳಲ್ಲಿ ಸಾರ್ವಜನಿಕ ಕುಂದು-ಕೊರತೆ ಕುರಿತು ಪ್ರಕಟವಾಗುವ ಸುದ್ದಿಗಳನ್ನು ಆದ್ಯತೆಯಾಗಿ ಪರಿಗಣಿಸಬೇಕು. ಇಲಾಖೆಯ ಅಧಿಕಾರಿಗಳು ಗಮನಹರಿಸಿ ಸಮಸ್ಯೆ ಪರಿಹಾರಕ್ಕೆ ಕ್ರಮ ಕೈಗೊಳ್ಳಬೇಕು. ಯಾವುದೇ ದೂರುಗಳು ಬಂದಂತಹ ಸಂದರ್ಭದಲ್ಲಿ ಅಧಿಕಾರಿಗಳು ಖುದ್ದು ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು ಎಂದು ನಿರ್ದೇಶನ ನೀಡಿದರು.

> ದುರಸ್ತಿ, ಹಕ್ಕುಪತ್ರ, ಸಾಗುವಳಿ ಚೀಟಿ, ಆರ್‌ಟಿಸಿ ತಿದ್ದುಪಡಿ, ಜಮೀನಿಗೆ ಓಡಾಡಲು ರಸ್ತೆ, ರೈಲ್ವೆ ಯೋಜನೆಗೆ ಭೂಸ್ವಾಧೀನಕ್ಕೆ ಹೆಚ್ಚಿನ ಪರಿಹಾರ ಸಂಬಂಧ ಅರ್ಜಿಗಳು ಸಲ್ಲಿಕೆಯಾಗಿವೆ. ನಿಗದಿತ ಅವಧಿಯೊಳಗೆ ಅರ್ಜಿ ವಿಲೇವಾರಿ ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.
>
> **- ಕೆ.ಎಸ್. ಲತಾಕುಮಾರಿ, ಜಿಲ್ಲಾಧಿಕಾರಿ**

## ಎರಡು ಕಾರುಗಳ ಡಿಕ್ಕಿ: ಇಬ್ಬರ ಸಾವು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ಶೆಟ್ಟಿಹಳ್ಳಿ ಗ್ರಾಮದ ಬಳಿ ಶನಿವಾರ ಎರಡು ಕಾರುಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಇಬ್ಬರು ಸ್ಥಳದಲ್ಲೇ ಮೃತಪಟ್ಟು ನಾಲ್ವರು ಗಂಭೀರ ಗಾಯಗೊಂಡಿದ್ದಾರೆ.

ಬೆಂಗಳೂರಿನ ಸಂಜಯ ನಗರದ ಮೀನಾಕ್ಷಿ, ಚನ್ನರಾಯಪಟ್ಟಣ ಮೂಲದ ಪ್ರತಾಪ್ ಮೃತರು. ಬೆಂಗಳೂರಿನಿಂದ ಹಾಸನದ ಕಡೆಗೆ ಬರುತ್ತಿದ್ದ ಟಯೋಟಾ ಕ್ರಾಮಿ ಕಾರು, ಹಾಸನದಿಂದ ಚನ್ನರಾಯಪಟ್ಟಣ ಕಡೆಗೆ ತೆರಳುತ್ತಿದ್ದ ಎರಿಟಿಗಾ ಕಾರಿಗೆ ಗ್ರಾಮದ ಮೇಲ್ಸೇತುವೆ ಬಳಿ ಡಿಕ್ಕಿಯಾಗಿದೆ.

ಅಪಘಾತದ ರಭಸಕ್ಕೆ ಎರಡು ಕಾರುಗಳು ಸಂಪೂರ್ಣ ಜಖಂಗೊಂಡಿವೆ. ಗಾಯಾಳುಗಳನ್ನು ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಹೆಚ್ಚಿನ ಚಿಕಿತ್ಸೆಗಾಗಿ ಹಿಮ್ಸ್‌ಗೆ ದಾಖಲಿಸಲಾಯಿತು. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮಾಗಡಿ-ಸೋಮವಾರಪೇಟೆ ರಸ್ತೆ ಮರು ನಿರ್ಮಾಣಕ್ಕೆ ಸೂಚನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಮಾಗಡಿ-ಸೋಮವಾರಪೇಟೆ ರಾಜ್ಯ ಹೆದ್ದಾರಿ ಕಾಮಗಾರಿ ಸಂಪೂರ್ಣ ಕಳಪೆಯಾಗಿದ್ದು ಮರು ನಿರ್ಮಾಣ ಮಾಡಬೇಕು ಎಂದು ಸಂಸದ ಶ್ರೇಯಸ್ ಪಟೇಲ್ ಅಧಿಕಾರಿಗಳಿಗೆ ಸೂಚಿಸಿದರು.

ತಾಲ್ಲೂಕಿನ ವಿವಿಧ ಗ್ರಾಮಗಳಿಗೆ ಭೇಟಿ ನೀಡಿದ್ದ ಅವರು ರಸ್ತೆ ಕಾಮಗಾರಿ ಪರಿಶೀಲಿಸಿ ಅಧಿಕಾರಿಗೆ ದೂರವಾಣಿ ಮೂಲಕ ಸಂಪರ್ಕಿಸಿ, ರಾಜ್ಯ ಹೆದ್ದಾರಿ ಕಾಮಗಾರಿ ಸಂಪೂರ್ಣ ಕಳಪೆಯಾಗಿದೆ. ಸಿದ್ದಾಪುರ ಗೇಟ್‌ನಲ್ಲಿ ವಾಹನ ಓಡಾಟಕ್ಕೆ ಕಷ್ಟವಾಗುತ್ತಿದೆ. ರಸ್ತೆ ಮರು ನಿರ್ಮಾಣ ಮಾಡಬೇಕೆಂದು ಸೂಚನೆ ನೀಡಿದರು. ಮರಿಯ ನಗರ ಚರ್ಚ್, ಕೊಣನೂರು ಪಟ್ಟಣದ ತೂಗು ಸೇತುವೆ ವೀಕ್ಷಿಸಿದರು. ಕೊಣನೂರು ಹೋಬಳಿಯ ಬೆಟ್ಟಗಳಲೆ, ಅರಗಲ್ಲು ಗ್ರಾಮದ ರೈತರ ಸಮಸ್ಯೆಗೆ ಸ್ಪಂದಿಸಿದರು.

ಕಾಂಗ್ರೆಸ್ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ಹೆಚ್.ಪಿ. ಶ್ರೀಧರ್‌ಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೋಮಶೇಖರ್, ದಶರಥ, ಮುಖಂಡರಾದ ಮಾಯಪ್ಪ, ಶಹಬಾಜ್, ಚಂದು ಪ್ರವೀಣ್, ನಿತಿನ್ ಮತ್ತಿತರರಿದ್ದರು.

## ನಶೆ ಮುಕ್ತ ಜಿಲ್ಲೆ ನಿರ್ಮಾಣಕ್ಕೆ ಎಲ್ಲರ ಸಹಕಾರ ಅಗತ್ಯ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯಲ್ಲಿ ಮಾದಕ ವಸ್ತುಗಳ ಸಾಗಾಟ, ಮಾರಾಟ ಹಾಗೂ ಸೇವನೆಯಂತಹ ಪ್ರಕರಣಗಳ ಪತ್ತೆಹಚ್ಚಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ನಾರ್ಕೋ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಾದಕ ವಸ್ತುಗಳು ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತಿವೆ. ಅಧಿಕಾರಿಗಳು ಅದನ್ನು ಗಂಭೀರವಾಗಿ ಪರಿಗಣಿಸಿ ಪತ್ತೆ ಮಾಡುವುದರ ಜೊತೆಗೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದರು.

ಒಂದು ಕುಟುಂಬ, ಸಮಾಜ ರಕ್ಷಣೆಗಾಗಿ ದುಶ್ಚಟಗಳಿಂದ ಎಲ್ಲರೂ ದೂರವಿರಬೇಕು. ಗಾಂಜಾ ಸೇವನೆ ತಡೆಯುವ ನಿಟ್ಟಿನಲ್ಲಿ ಸರಬರಾಜು ಮಾಡುವ ಸಂಪರ್ಕವನ್ನು ಸ್ಥಗಿತಗೊಳಿಸಬೇಕು. ಈ ನಿಟ್ಟಿನಲ್ಲಿ ರೈಲ್ವೆ ಪೊಲೀಸರು ಜಾಗ್ರತೆ ವಹಿಸಬೇಕು. ಈ ಕಾರ್ಯಕ್ಕೆ ಸ್ವಯಂ ಸೇವಾ ಸಂಸ್ಥೆಗಳು ಸಹಕಾರ ನೀಡಬೇಕು ಎಂದರು.

ಶಾಲಾ ಕಾಲೇಜುಗಳ ಮಕ್ಕಳ ಚಲನವಲನಗಳಲ್ಲಿ ಬದಲಾವಣೆ ಕಂಡುಬಂದರೆ ಶಿಕ್ಷಕರು, ಬಿಆರ್‌ಸಿ, ಸಿಆರ್‌ಸಿ ಹಾಗೂ ಎಸ್‌ಡಿಎಂಸಿ ಸದಸ್ಯರ ಮೂಲಕ ಸಂಬಂಧಪಟ್ಟವರ ಗಮನಕ್ಕೆ ತರಬೇಕು. ಈ ಕುರಿತು ಅರಿವು ಮೂಡಿಸಲು ಶಾಲಾ ಕಾಲೇಜು ಹಂತಗಳಲ್ಲಿ ಶಿಬಿರ ನಡೆಸಬೇಕೆಂದು ನಿರ್ದೇಶನ ನೀಡಿದರು.

ತಮ್ಮ ಮಕ್ಕಳು ದಾರಿ ತಪ್ಪುತ್ತಿದ್ದಾರೆಯೇ ಎಂಬುದನ್ನು ಪೋಷಕರು ಅರಿಯಬೇಕು. ಈ ಸಂಬಂಧ ಮಕ್ಕಳು ಹಾಗು ಪೋಷಕರ ಜೊತೆ ಸಮಾಲೋಚನೆ ನಡೆಸಿ ತಿಳವಳಿಕೆ ನೀಡಬೇಕು. ಜೊತೆಗೆ ಸಮಾಜ ಬಾಹಿರ ಕೃತ್ಯಗಳ ವಿರುದ್ಧ ಹೋರಾಟ ಎಲ್ಲರದ್ದಾಗಿರಬೇಕು. ಕಾಫಿ ತೋಟಗಳಿಗೆ ವಲಸೆ ಬರುವ ಕಾರ್ಮಿಕರು, ಕಟ್ಟಡ ಕಾರ್ಮಿಕರ ಬಗ್ಗೆ ಗಮನಹರಿಸಿ ವಾಹನ ಚಾಲಕರು, ಶಾಲೆ ಬಿಟ್ಟ ಮಕ್ಕಳು ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಇಂತಹ ದುರ್ಬಲ ವರ್ಗದ ಜನರನ್ನು ಗುರುತಿಸಿ ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ವಸತಿ ನಿಲಯಗಳ ವಾರ್ಡನ್ ಮತ್ತು ಅಡುಗೆಯವರಿಗೆ ಒಂದು ಸಭೆ ನಡೆಸಿ ಅವರ ಜವಾಬ್ದಾರಿ ಮತ್ತು ಮಕ್ಕಳ ಸುರಕ್ಷತೆಗೆ ಗಮನಹರಿಸಬೇಕು. ಮಾದಕ ವಸ್ತುಗಳ ಸೇವನೆ ಮಾಡಿರುವುದನ್ನು ಪತ್ತೆ ಹಚ್ಚಲು ಪ್ರತಿ ತಾಲ್ಲೂಕು ಆಸ್ಪತ್ರೆಯಲ್ಲಿ ಡಿಟೆಕ್ಟಿವ್ ಕಿಟ್ ಇರುವಂತೆ ನೋಡಿಕೊಳ್ಳಿ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಅವರಿಗೆ ತಿಳಿಸಿದರು. ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳು ಗ್ರಾಮ ಸಹಾಯಕರು ಹಾಗು ಕಂದಾಯ ನಿರೀಕ್ಷಕರ ಸಹಾಯ ಪಡೆದು ಕೃಷಿ ಭೂಮಿಯಲ್ಲಿ ಗಾಂಜಾ ಬೆಳೆಯ ಬಗ್ಗೆ ಪರಿಶೀಲನೆ ಮಾಡುವಂತೆ ಸೂಚಿಸಿದರು. ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್ ಕುಮಾರ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ವೆಂಕಟೇಶ್ ನಾಯ್ಡು, ತಮ್ಮಯ್ಯ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಅನಿಲ್, ಹಿಮ್ಸ್ ನಿರ್ದೇಶಕ ಡಾ. ಬಿ. ರಾಜಣ್ಣ ಹಾಗು ಇತರರಿದ್ದರು.

## ವನ ಮಹೋತ್ಸವಕ್ಕೆ ಶಾಸಕ ಸ್ವರೂಪ್ ಚಾಲನೆ



ಹಾಸನ: ತಾಲ್ಲೂಕಿನ ಯಗಚಿ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಶನಿವಾರ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ, ಎಕೋ ಕ್ಲಬ್ ವತಿಯಿಂದ ನಡೆದ ವನಮಹೋತ್ಸವಕ್ಕೆ ಶಾಸಕ ಹೆಚ್.ಪಿ. ಸ್ವರೂಪ್ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಪ್ರಕೃತಿ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಜನಸಂಖ್ಯೆ ಹೆಚ್ಚಳ, ವಾಹನಗಳ ವಿಪರೀತ ಓಡಾಟ, ಅಭಿವೃದ್ಧಿ ಹೆಸರಿನಲ್ಲಿ ಗಿಡಮರಗಳ ನಾಶ ಮಾಡುತ್ತಿರುವುದರಿಂದ ಸಂಕಷ್ಟಕ್ಕೆ ಆಹ್ವಾನ ನೀಡುತ್ತಿದ್ದೇವೆ. ಪರಿಸರ ರಕ್ಷಿಸದಿದ್ದರೆ ಭವಿಷ್ಯದ ದಿನಗಳು ಭೀಕರವಾಗುತ್ತವೆಂದು ಎಚ್ಚರಿಕೆ ನೀಡಿದರು.

ಪ್ರತಿ ಮನೆ ಮನೆಯಲ್ಲಿ ಗಿಡಗಳನ್ನು ನೆಡುವ ಮೂಲಕ ಕಲುಷಿತ ವಾತಾವರಣವನ್ನು ಬಗ್ಗು ಬಡಿದು ಸ್ವಚ್ಛ ಹಾಗು ಸುಂದರ ಪರಿಸರ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು. ಮೊದಲೆಲ್ಲ ಎಲ್ಲೆಂದರಲ್ಲಿ ಹಣ್ಣಿನ ಹೂವಿನ ಗಿಡಗಳು ಕಾಣಿಸುತ್ತಿದ್ದವು. ಇತ್ತೀಚಿನ ದಿನಗಳಲ್ಲಿ ಅಭಿವೃದ್ಧಿ ಹೆಸರಿನಲ್ಲಿ ಮರ-ಗಿಡಗಳು ಮಾಯವಾಗುತ್ತಿವೆ. ಆದುದರಿಂದ ಮುಂದಿನ ಪೀಳಿಗೆಗೆ ಸುಂದರ ಪರಿಸರ ಉಳಿಸಲು ಎಲ್ಲರೂ ಜಾಗೃತಿ ವಹಿಸಬೇಕೆಂದರು. ಗ್ರಾಮಸ್ಥರು, ವಿವಿಧ ಸಂಘ-ಸಂಸ್ಥೆಗಳ ಮುಖಂಡರು ಹಾಜರಿದ್ದರು.

## ಕ್ರಿಕೆಟ್‌ಗೆ ಸಿಗುವ ಆದ್ಯತೆ ಬೇರೆ ಕ್ರೀಡೆಗೂ ಸಿಗಲಿ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕ್ರಿಕೆಟ್‌ಗೆ ಸಿಗುವ ಆದ್ಯತೆ ಬೇರೆ ಕ್ರೀಡೆಗೂ ಸಿಗಬೇಕು ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಮ್ಮಯ್ಯ ಪ್ರತಿಪಾದಿಸಿದರು.

ನಗರದ ಕಲಾ ಕಾಲೇಜು ಮೈದಾನದಲ್ಲಿ ಶನಿವಾರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವಾರ್ಷಿಕ ಕ್ರೀಡಾಕೂಟದ ಅಂಗವಾಗಿ ಹಮ್ಮಿಕೊಂಡಿದ್ದ ಕ್ರಿಕೆಟ್ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿ,

ಹಿಂದಿನ ಕಾಲಘಟ್ಟದಲ್ಲಿ ಆಹಾರಕ್ಕಾಗಿ ಪೂರ್ವಜರು ಒಂದು ಕಡೆಯಿಂದ ಮತ್ತೊಂದು ಕಡೆಗೆ ನಡೆದು ಹೋಗುವ ಅನಿವಾರ್ಯತೆ ಇತ್ತು. ಕ್ರಮೇಣ ವ್ಯವಸಾಯ ಪದ್ಧತಿ ಬಂತು. ಆಗಲೂ ನಮ್ಮ ಪೂರ್ವಜರು ಹೋರಾಟ ಮಾಡುತ್ತಿದ್ದರು. ಆದರೀಗ ಎಲ್ಲವೂ ಕುಳಿತಲ್ಲಿಗೆ ಬರುತ್ತಿದೆ. ಮನೋರಂಜನೆಗಾಗಿ ಕ್ರೀಡೆ ಪೂರಕ ಅಂತೀವಿ, ಆದರೆ ಆಟ ನೋಡುತ್ತೇವೆ, ಸಕ್ರಿಯವಾಗಿ ತೊಡಗಿಸಿಕೊಳ್ಳುವುದಿಲ್ಲ ಎಂದರು.

ನಾವು ಕ್ರಿಯಾಶೀಲರಾಗಿಲ್ಲದೇ ಇರುವುದೂ ಅನಾರೋಗ್ಯಕ್ಕೆ ಕಾರಣ, ಇದರಿಂದ ಆಸ್ಪತ್ರೆಗೆ ಹಣ ಸಂದಾಯ ಮಾಡುವಂತಾಗಿದೆ. ಹಾಗಾಗಿ ನೀವೆಲ್ಲರೂ ಹೆಚ್ಚು ಹೆಚ್ಚು ಕ್ರೀಡಾ ಚಟುವಟಿಗಳಲ್ಲಿ ತೊಡಗಿಸಿಕೊಳ್ಳಬೇಕು. ಮನುಷ್ಯರ ಜೀವನದಲ್ಲಿ ಆಟೋಟ ಬಹಳ ಮುಖ್ಯ, ಆಟೋಗಳಿಗೆ ಹೆಚ್ಚಿನ ಉತ್ತೇಜನ ನೀಡಿ, ನಿಮ್ಮ ವೃತ್ತಿಯಲ್ಲೂ ಕ್ರೀಡಾ ಸುದ್ದಿಗಳಿಗೆ ಹೆಚ್ಚಿನ ಮಹತ್ವ, ಆದ್ಯತೆ ನೀಡಿ. ಕೆಯೂಡಬ್ಲ್ಯೂಜೆ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಹೆಚ್.ಬಿ.ಮದನಗೌಡ, ಪತ್ರಕರ್ತರ ಸಂಘದ ಮಾಜಿ ಜಿಲ್ಲಾಧ್ಯಕ್ಷ ಲೀಲಾವತಿ, ಆರ್.ಪಿ. ವೆಂಕಟೇಶ್‌ಮೂರ್ತಿ, ಕೆಯೂಡಬ್ಲ್ಯೂಜೆ ರಾಜ್ಯ ವಿಶೇಷ ಪ್ರತಿನಿಧಿ ರವಿ ನಾಕಲಗೂಡು, ಸಂಘದ ಅಧ್ಯಕ್ಷ ಕೆ.ಹೆಚ್.ವೇಣುಕುಮಾರ್ ಮಾತನಾಡಿದರು.

ಶಾಸಕ ಹೆಚ್.ಪಿ. ಸ್ವರೂಪ್ ಅವರು ಕಾರ್ಯಕ್ರಮಕ್ಕೆ ಶುಭ ಕೋರಿದರು.

ಹೆಚ್.ಟಿ.ಮೋಹನ್ ಕುಮಾರ್ ಕುಮಾರ್ ನಿರೂಪಿಸಿದರು. ಕೆ.ಎಂ. ಹರೀಶ್ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಶಶಿಧರ್ ಬಿ.ಸಿ., ಪದಾಧಿಕಾರಿಗಳಾದ ಸಿ.ಬಿ.ಸಂತೋಷ್, ಪಿ.ಎ.ಶ್ರೀನಿವಾಸ್ ಮತ್ತಿತರಿದ್ದರು. ಕ್ರಿಕೆಟ್ ಪಂದ್ಯಾವಳಿಯ ಮೊದಲ ಪಂದ್ಯ ಆರಂಭವಾಗುತ್ತಿದ್ದಂತೆಯೇ ಜೋರು ಮಳೆ ಆರಂಭವಾದ್ದರಿಂದ ಕ್ರೀಡಾಕೂಟ ಅರ್ಧಕ್ಕೆ ಮೊಟಕುಗೊಂಡಿತು.

## ಕಾಡಾನೆ ಹಾವಳಿಗೆ ಹೈರಾಣಾದ ಮಲೆನಾಡ ಜನರು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ವಡೂರು ಗ್ರಾಮದಲ್ಲಿ ಕಳೆದ ಎರಡು ತಿಂಗಳಿಂದ ಮೂರು ಕಾಡಾನೆಗಳು ಬೀಡು ಬಿಟ್ಟಿದ್ದು ದಿನ ನಿತ್ಯ ಗ್ರಾಮದ ರೈತರ ತೋಟ, ಗದ್ದೆಗಳಿಗೆ ಲಗ್ಗೆ ಇಟ್ಟು ಬೆಳೆ ಹಾನಿ ಮಾಡುತ್ತಿದ್ದು ಕಾಡಾನೆ ಹಾವಳಿಯಿಂದ ಗ್ರಾಮಸ್ಥರು ಹೈರಾಣಾಗಿದ್ದಾರೆ.

ಬೇಲೂರು ತಾಲ್ಲೂಕಿನಲ್ಲಿ ಕಾಡಾನೆ ಸೆರೆ ಕಾರ್ಯಾಚರಣೆ ನಡೆಸುವ ವೇಳೆ ಗುಂಪಿನಿಂದ ಬೇರ್ಪಟ್ಟು ಬಂದಿರುವ ಮೂರು ಕಾಡಾನೆಗಳು ವಡೂರು, ಕಿರುಹುಣಸೆ ಹಾಗೂ ಹೆಗ್ಗೋವೆ ಗ್ರಾಮದಲ್ಲಿ ಸಂಚರಿಸುತ್ತಿವೆ. ನಿತ್ಯ ಗ್ರಾಮದ ಕಾಫಿ ತೋಟಗಳ ಮೇಲೆ ದಾಳಿ ನಡೆಸುವ ಆನೆಗಳು ತೆಂಗು, ಬಾಳೆ, ಅಡಿಕೆ ಫಸಲನ್ನು ತಿಂದು ನಾಶಪಡಿಸುತ್ತಿವೆ. ಜೊತೆಗೆ ಕಾಫಿ ತೋಟಗಳಲ್ಲಿ ಆನೆಗಳು ಸಂಚರಿಸುವುದರಿಂದ ಕಾಫಿಗಿಡಗಳು ಮರಿದು ರೈತರಿಗೆ ಅಪಾರ ನಷ್ಟ ಉಂಟಾಗುತ್ತಿದೆ.

### ಜೀವ ಭಯದಲ್ಲೇ ಓಡಾಟ

ಗ್ರಾಮದಲ್ಲಿ ಕಾಡಾನೆಗಳು ಬೀಡು ಬಿಟ್ಟಿರುವುದರಿಂದ ಗ್ರಾಮಸ್ಥರು ನಿತ್ಯ ಜೀವಭಯದಲ್ಲೇ ಸಂಚರಿಸಬೇಕಾಗಿದೆ. ಇನ್ನು ಕಾಡಾನೆಗಳು ಯಾವಾಗ ಯಾರ ತೋಟಕ್ಕೆ ಲಗ್ಗೆ ಇಡುತ್ತವೆ ಎಂಬುದೇ ಗೊತ್ತಾಗುವುದಿಲ್ಲ. ಹೀಗಾಗಿ ತೋಟ ಗದ್ದೆಗಳಿಗೆ ಕೆಲಸಕ್ಕೆ ತೆರಳಲು ಕೂಲಿ ಕಾರ್ಮಿಕರು ಹಿಂದೇಟು ಹಾಕುವಂತಾಗಿದೆ. ಶಾಲಾ ಮಕ್ಕಳೂ ಕೂಡ ಆತಂಕದಲ್ಲೇ ಶಾಲೆಗೆ ತೆರಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

### ಅರಣ್ಯ ಇಲಾಖೆ ನಿರ್ಲಕ್ಷ್ಯ

ಗ್ರಾಮದಲ್ಲಿ ಕಾಡಾನೆಗಳು ಬೀಡು ಬಿಟ್ಟಿರುವ ಬಗ್ಗೆ ಆರ್ ಆರ್‌ಟಿ ಹಾಗೂ ಇಟಿಎಫ್ ಸಿಬ್ಬಂದಿ ನಿತ್ಯ ಬೆಳಗ್ಗೆ ಹಾಗೂ ಸಂಜೆ ಮಾಹಿತಿ ನೀಡಿ ತೆರಳುತ್ತಾರೆ. ಜೊತೆಗೆ ಆರ್‌ಎಫ್‌ಒ ಹೇಮಂತ್‌ಕುಮಾರ್ ಕೂಡ ತಮ್ಮ ಸಿಬ್ಬಂದಿಯೊಂದಿಗೆ ಗ್ರಾಮಕ್ಕೆ ಬಂದು ಕಾಡಾನೆ ದಾಳಿಯಿಂದ ಉಂಟಾಗಿರುವ ನಷ್ಟ ಪರಿಶೀಲನೆ ನಡೆಸಿ, ಆನೆಗಳಿರುವ ಬಗ್ಗೆ ಗ್ರಾಮಸ್ಥರಿಗೆ ಎಚ್ಚರಿಕೆ ನೀಡಿ ಹೋಗುತ್ತಾರೆ ವಿನಃ ಆನೆಗಳನ್ನು ಗ್ರಾಮದಿಂದ ಬೇರೆಡೆ ಓಡಿಸುವ ಅಥವಾ ಸ್ಥಳಾಂತರಿಸುವ ಕೆಲಸ ಮಾತ್ರ ಮಾಡುತ್ತಿಲ್ಲ.

ಕಿರುಹುಣಸೆಯಿಂದ ವಡೂರು ಗ್ರಾಮದ ವರೆಗೂ ರಸ್ತೆ ಬದಿ ಆಳೆತ್ತರದ ಜಂಗಲ್ ಬೆಳೆದು ನಿಂತಿದೆ. ಇದರಿಂದ ರಸ್ತೆ ಆನೆಗಳು ಬಂದು ನಿಂತಿದ್ದರೂ ರಸ್ತೆಯಲ್ಲಿ ಸಂಚರಿಸುವವರಿಗೆ ಆನೆ ಇರುವ ಬಗ್ಗೆ ಗೊತ್ತಾಗುವುದಿಲ್ಲ. ಹೀಗಾಗಿ ರಸ್ತೆ ಬದಿ ಬೆಳೆದಿರುವ ಜಂಗಲ್ ಕ್ಲೀನ್ ಮಾಡುವಂತೆ ಗ್ರಾಮಸ್ಥರು ಕುನಿಗನಹಳ್ಳಿ ಗ್ರಾಮಪಂಚಾಯಿತಿ ಗ್ರಾಮ ಸಭೆಯಲ್ಲಿ ಮನವಿ ಸಲ್ಲಿಸುತ್ತಲೇ ಬರುತ್ತಿದ್ದಾರೆ. ಆದರೆ ಗ್ರಾಪಂನವರು ಮಾತ್ರ ಗ್ರಾಮದ ರಸ್ತೆಯು ಪಿಡಬ್ಲ್ಯೂಡಿ ಇಲಾಖೆಗೆ ಸೇರುವುದರಿಂದ ಅವರನ್ನೇ ಕೇಳಬೇಕು ಎಂದು ಹೇಳುತ್ತಾರೆ. ಇತ್ತ ಅರಣ್ಯ ಇಲಾಖೆಯವರನ್ನು ಪ್ರಶ್ನಿಸಿದರೆ ಜಂಗಲ್ ಕ್ಲೀನ್ ಮಾಡಲು ನಮ್ಮ ಬಳಿ ಅನುದಾನವಿಲ್ಲ ಎಂಬ ಉತ್ತರ ನೀಡುತ್ತಾರೆ. ಅರಣ್ಯ ಇಲಾಖೆಯಲ್ಲಿ ಸಣ್ಣ ಪುಟ್ಟ ಕೆಲಸ ಮಾಡಲು ಅನುದಾನವಿಲ್ಲ ಎಂದಾದರೆ ಆನೆ ಸಮಸ್ಯೆಯನ್ನು ಹೇಗೆ ಬಗೆಹರಿಸುತ್ತಾರೆ ಎಂಬುದು ಗ್ರಾಮಸ್ಥರ ಪ್ರಶ್ನೆಯಾಗಿದೆ.

ಕನ್ನಡ ಪೋಸ್ಟ್
E-mail : kannadapostnews@gmail.com facebook.com / ಕನ್ನಡ post



# 2.38 ಕೋಟಿ ರೂ. ವೆಚ್ಚದ ಕಾಮಗಾರಿ ಕ್ರಿಯಾ ಯೋಜನೆಗೆ ಒಪ್ಪಿಗೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ವಿವಿಧ ಇಲಾಖೆಗಳ 2.38 ಕೋಟಿ ರೂ. ವೆಚ್ಚದ ಕಾಮಗಾರಿಗಳ ಕ್ರಿಯಾ ಯೋಜನೆಗೆ ಒಪ್ಪಿಗೆ ನೀಡಲಾಯಿತು.

ತಾಲ್ಲೂಕು ಪಂಚಾಯಿತಿ ಆಡಳಿತಾಧಿಕಾರಿ ಎಂ. ಬಾಬು ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, 2025-26ನೇ ಸಾಲಿಗೆ ಲೆಕ್ಕ ಶೀರ್ಷಿಕೆಯಡಿ ಶಿಕ್ಷಣ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ತಲಾ 35.74 ಲಕ್ಷ ರೂ., ಆರೋಗ್ಯ ಇಲಾಖೆ, ಗ್ರಂಥಾಲಯ, ಗ್ರಾಮೀಣ ಮತ್ತು ರಸ್ತೆ ಸಂಪರ್ಕ ಅಭಿವೃದ್ದಿಗೆ ತಲಾ 23.82 ಲಕ್ಷ ರೂ., ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ದಿಗೆ 60.70 ಲಕ್ಷ ರೂ., ಅಂಗವಿಕಲರ ಅಭಿವೃದ್ದಿಗೆ 11.91 ಲಕ್ಷ ರೂ., ಇತರೆ ವಲಯಕ್ಕೆ 21.49 ಲಕ್ಷ ರೂ. ಹಾಗೂ ಸಾಮಾಜಿಕ ಲೆಕ್ಕ ಪರಿಶೋಧನೆ ಶುಲ್ಕ 1.19 ಲಕ್ಷ ರೂ. ಅನುದಾನ ಹಂಚಿಕೆ ಮಾಡಲಾಗಿದೆ. ಅಭಿವೃದ್ದಿ ಕಾರ್ಯಗಳಿಗೆ ಸಲ್ಲಿಸಿರುವ ಪ್ರಸ್ತಾವನೆಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದು, ಅಗತ್ಯಕಷ್ಟೆ ಆದ್ಯತೆ ನೀಡಿ ಗುಣಮಟ್ಟದ ಬಗ್ಗೆ ಗಮನ ಹರಿಸುವಂತೆ ಆಡಳಿತಾಧಿಕಾರಿ ಬಾಬು ಸೂಚಿಸಿದರು.

ಶಾಲೆಗಳಲ್ಲಿ ಶೌಚಾಲಯ, ಕುಡಿಯುವ ನೀರು ಸೇರಿದಂತೆ ಮೂಲ ಸೌಕರ್ಯಗಳಿಗೆ ಒತ್ತು ನೀಡಬೇಕು. ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಅಂಗನವಾಡಿ ಕೇಂದ್ರಗಳಿಗೆ ಸ್ಥಳ ಗುರುತಿಸಿ ಸ್ವಂತ ಕಟ್ಟಡ ನಿರ್ಮಿಸಿಕೊಡಲು



ಗ್ರಾಪಂಗಳು ಗಮನ ಹರಿಸಬೇಕು ಎಂದು ನಿರ್ದೇಶನ ನೀಡಿದರು.

ಗ್ರಾಮೀಣ ಭಾಗದಲ್ಲಿ ರಸ್ತೆ ಸಂಪರ್ಕ ಕಲ್ಪಿಸಲು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ರಸ್ತೆ ನಿರ್ಮಾಣ ಕುರಿತು ನಿಗದಿತ ಮಾಹಿತಿ ಇಲ್ಲದಿರುವ ಬಗ್ಗೆ ಆಕ್ಷೇಪಿಸಿ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅನುದಾನದಲ್ಲಿ ವಿದ್ಯಾರ್ಥಿ ನಿಲಯಗಳ ಅಭಿವೃದ್ಧಿ, ಸಮುದಾಯ ಭವನ ನಿರ್ಮಾಣಕ್ಕೂ ಒತ್ತು ನೀಡಬೇಕು. ಗ್ರಾಮ ಗ್ರಂಥಾಲಯಗಳಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯ ಪಠ್ಯ ಪುಸ್ತಕಗಳು ಮತ್ತು ಸಾಮಾನ್ಯ ಜ್ಞಾನ ಹೆಚ್ಚಿಸುವ ಪುಸ್ತಕಗಳಿಗೆ ಆದ್ಯತೆ ನೀಡುವಂತೆ ತಿಳಿಸಿದರು.

ಮುಸುಕಿನ ಜೋಳದ ಬೆಳೆಗೆ ತಗುಲಿರುವ ಬಿಳಿಸುಳಿ ರೋಗಕ್ಕೆ ಬೆಳೆ ಬದಲಾವಣೆಗೆ ತಜ್ಞರ ಸಮಿತಿ ಶಿಫಾರಸ್ಸು ಮಾಡಿದೆ. ಈ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸುವಂತೆ ಹಾಗೂ ಬೆಳೆ ವಿಮೆ ಕುರಿತು ರೈತರಿಗೆ ಅಗತ್ಯ ಮಾಹಿತಿ ನೀಡುವಂತೆ ಸೂಚಿಸಲಾಯಿತು.

ಜಿಲ್ಲೆಯಲ್ಲಿ ಹೃದಯಾಘಾತ ಪ್ರಕರಣ ಹೆಚ್ಚುತ್ತಿದ್ದು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಜತೆಗೆ ತಪಾಸಣಾ ಶಿಬಿರಗಳನ್ನು ಗ್ರಾಪಂ ಮಟ್ಟದಲ್ಲಿ ಆಯೋಜಿಸಬೇಕು. ರಸ್ತೆ ಬದಿ ಮಾರಾಟಮಾಡುವ ತಿಂಡಿ ತಿನಿಸುಗಳ ಗುಣಮಟ್ಟ ಹಾಗೂ ಶುಚಿತ್ವ ಕುರಿತು ಕಟ್ಟುನಿಟ್ಟಿನ ಪರಿಶೀಲನೆ ನಡೆಸಬೇಕು ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ಪುಷ್ಪಲತಾ ಅವರಿಗೆ ಸೂಚನೆ ನೀಡಿದರು.

ಕೆಲವು ಖಾಸಗಿ ಶಾಲೆಗಳು ಎಸ್‌ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಪಾಸಾಗುವಂತಹ ವಿದ್ಯಾರ್ಥಿಗಳನ್ನು ಗುರುತಿಸಿ ಸರ್ಕಾರಿ ಶಾಲೆಗೆ ದಾಖಲಾಗುವಂತೆ ವರ್ಗಾವಣೆ ಪತ್ರ ನೀಡಿ ಕಳಿಸುತ್ತಿದ್ದಾರೆ. ಫಲಿತಾಂಶ ಕಡಿಮೆಯಾಗುತ್ತದೆ ಎಂಬ ಕಾರಣದಿಂದ ಈ ರೀತಿ ವರ್ತಿಸುತ್ತಿವೆ. ಇದು ಮಾನವೀಯ ನಡೆಯಲ್ಲ, ಶಿಕ್ಷಣ ಇಲಾಖೆ ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಬೇಕು, ಸರ್ಕಾರಿ ಶಾಲೆಗಳ ಶಿಕ್ಷಕರಿಗೆ ಪುನಶ್ಚೇತನ ಕಾರ್ಯಾಗಾರಗಳನ್ನು ಏರ್ಪಡಿಸುವಂತೆ ಬಿಇಒ ನಾರಾಯಣ್ ಅವರಿಗೆ ಸೂಚಿಸಿದರು.

ತಾಪಂ ಇಒ ಶ್ರೀನಿವಾಸ್, ತಾಲ್ಲೂಕು ಮಟ್ಟದ ಅಧಿಕಾರಿಗಳು, ಗ್ರಾಪಂ ಪಿಡಿಒಗಳು ಸಭೆಯಲ್ಲಿ ಭಾಗವಹಿಸಿದ್ದರು.

# ಮೂಲಸೌಕರ್ಯಕ್ಕಾಗಿ ರಸ್ತೆಯಲ್ಲಿ ಭತ್ತ ನಾಟಿ ಮಾಡಿ ಪ್ರತಿಭಟನೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಕಳೆದ ಎರಡು ದಶಕಗಳಿಂದ ಮೂಲಸೌಕರ್ಯ ಒದಗಿಸಿಲ್ಲ ಎಂದು ಆರೋಪಿಸಿ ಪಟ್ಟಣದ 23ನೇ ವಾರ್ಡ್ ನಿವಾಸಿಗಳು ರಸ್ತೆ ಮಧ್ಯೆ ಭತ್ತ ನಾಟಿ ಹಾಗೂ ಕಬ್ಬಿಣದ ಸರಳು ನೆಟ್ಟು ವಿನೂತನ ಪ್ರತಿಭಟನೆ ನಡೆಸಿದರು.

ಹಲವು ವರ್ಷಗಳಿಂದ ರಸ್ತೆ, ಚರಂಡಿ, ಕುಡಿಯುವ ನೀರು ಸೇರಿ ಮೂಲಸೌಲಭ್ಯಗಳಿಲ್ಲದೆ ನರಕಯಾತನೆ ಅನುಭವಿಸುವಂತಾಗಿದೆ. ಸಂಬಂಧಪಟ್ಟ ಅಧಿಕಾರಿ ಹಾಗೂ ಜನಪ್ರತಿನಿಧಿಗಳ ನಿರ್ಲಕ್ಷ್ಯದಿಂದ ಪ್ರತಿದಿನ ತೊಂದರೆ ಅನುಭವಿಸುವಂತಾಗಿದೆ ಎಂದರು.

ರಸ್ತೆ ನಿರ್ಮಾಣ ಸಮಯದಲ್ಲಿ ಹಾಕಲಾದ ಕಬ್ಬಿಣದ ರಾಡ್‌ಗಳು ಬಿರುಕು ಬಿಟ್ಟು ಹೊರಬಂದಿದ್ದು, ವಾಹನ ಸವಾರರಿಗೆ ಭಾರೀ ಕಷ್ಟವಾಗಿದೆ. ಪ್ರತಿದಿನ ಬೈಕ್ ಸವಾರರು ರಸ್ತೆಯಲ್ಲಿ ಬಿದ್ದು ಗಾಯ ಮಾಡಿಕೊಳ್ಳುತ್ತಿದ್ದಾರೆ. ಅವೈಜ್ಞಾನಿಕ ಚರಂಡಿಯಿಂದ ದುರ್ವಾಸನೆ ಹರಡುತ್ತಿದೆ. ಈ ಕುರಿತು ಹಲವು ಬಾರಿ ದೂರು ನೀಡಿದ್ದರೂ ಅಧಿಕಾರಿಗಳಿಂದ ಸಕಾರಾತ್ಮಕ ಪ್ರತಿಕ್ರಿಯೆ ಬಂದಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ಇನ್ನಾದರೂ ಅಧಿಕಾರಿಗಳು ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಬೇಲೂರುಸಕಲೇಶಪುರ ರಾಜ್ಯ ಹೆದ್ದಾರಿ ಬಂದ್ ಮಾಡಿ ಪ್ರತಿಭಟನೆ ನಡೆಸುತ್ತೇವೆ ಎಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು.

ಸ್ಥಳಕ್ಕೆ ಆಗಮಿಸಿದ ಪುರಸಭೆ ಎಂಜಿನಿಯರ್ ಸುಜಾತಾ ಮತ್ತು ಸಿಬ್ಬಂದಿ ರೇವಣ್ಣ, ವರದರಾಜ್ ಅವರು ಸಮಸ್ಯೆ ಆಲಿಸಿದರು. ಪರಿಸ್ಥಿತಿಯನ್ನು ಮೇಲಧಿಕಾರಿಗಳ ಗಮನಕ್ಕೆ ತರಲಾಗುವುದೆಂದು ಭರವಸೆ ನೀಡಿದರು.

ನಿವಾಸಿಗಳಾದ ಶಂಶು, ಮುತ್ತಲಿಬ್, ರವಿ, ವಾಜೀರ್, ಇಕ್ಬಾಲ್, ಖಲಂದರ್, ಡಿಸೋಜ, ರಜನಿ, ಪಾರ್ವತಿ ಮತ್ತಿತರರಿದ್ದರು.

# ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಆರಂಭಕ್ಕೆ ಆಗ್ರಹಿಸಿ ಪ್ರತಿಭಟನೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಶೀಘ್ರವೇ ಆರಂಭಿಸಬೇಕು ಎಂದು ಆಗ್ರಹಿಸಿ ಜನಪರ ಸಂಘಟನೆಗಳಿಂದ ಶನಿವಾರ ನೂತನ ಆಸ್ಪತ್ರೆ ಎದುರು ಪ್ರತಿಭಟನೆ ನಡೆಸಲಾಯಿತು.

ಜಿಲ್ಲೆಯ ಆರೋಗ್ಯ ಇಲಾಖೆಗೆ ಮಂಜೂರಾದ 340 ವೈದ್ಯರ ಹುದ್ದೆಗಳಲ್ಲಿ 117 ವೈದ್ಯರ ಹುದ್ದೆ ಖಾಲಿಯಿವೆ. ಅವುಗಳಲ್ಲಿ 36 ತಜ್ಞ ವೈದ್ಯರು, 22 ತುರ್ತು ಚಿಕಿತ್ಸಾ ವೈದ್ಯಾಧಿಕಾರಿಗಳು ಮತ್ತು 52 ಕರ್ತವ್ಯನಿರತ ವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇವೆ. ಒಟ್ಟು ಮಂಜೂರಾದ 1856 ವೈದ್ಯಕೀಯ ಸಿಬ್ಬಂದಿ ಹುದ್ದೆಗಳಲ್ಲಿ, 815 ಹುದ್ದೆ ಖಾಲಿ ಇವೆ. ಒಟ್ಟು ಮಂಜೂರಾದ 824 ವೈದ್ಯಕೀಯೇತರ ಸಿಬ್ಬಂದಿಗಳ ಹುದ್ದೆಗಳಲ್ಲಿ 664 ಖಾಲಿ ಇವೆ. ಇದನ್ನು ಸರಿಪಡಿಸಿ ಹಿಮ್ಸ್ ಗೆ ಬೇಕಾದ ಸೌಲಭ್ಯ ನೀಡಬೇಕು. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಆರಂಭಿಸಬೇಕು ಎಂದು ಆಗ್ರಹಿಸಿದರು.


# ಥಿಯಾಸೋಫಿಕಲ್ ಸೊಸೈಟಿ ಪ್ರತಿನಿಧಿಯಾಗಿ ಜನಾರ್ಧನ ಗುಪ್ತ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ಕೆನಡಾ ದೇಶದ ವ್ಯಾಂಕೂವರ್‌ನಲ್ಲಿ ಜು. 23ರಿಂದ ನಡೆಯಲಿರುವ ಥಿಯಾಸೋಫಿಕಲ್ ಸೊಸೈಟಿಯ 150ನೇ ವರ್ಷಾಚರಣೆ ಸಂಭ್ರಮದ ಅಂಗವಾಗಿ ಸಮ್ಮೇಳನದಲ್ಲಿ ಭಾರತ ನಿಯೋಜಿತ ಪ್ರತಿನಿಧಿಯಾಗಿ ಭಾಗವಹಿಸುತ್ತಿರುವ ಹಿರಿಯ ವಕೀಲ ಎ.ಆರ್. ಜನಾರ್ದನ ಗುಪ್ತ ಅವರನ್ನು ವಕೀಲರ ಸಂಘದ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು.

ಶುಕ್ರವಾರ ಪಟ್ಟಣದ ನ್ಯಾಯಾಲಯದ ಆವರಣದಲ್ಲಿನ ವಕೀಲರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಿರಿಯ ವಕೀಲರು, ಸಂಘದ ಪದಾಧಿಕಾರಿಗಳು ಹಾಗೂ ಸಂಘದ ಸದಸ್ಯರು ಹಾಜರಿದ್ದು ವಕೀಲರನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದರು.

ಜನಾರ್ಧನ್ ಗುಪ್ತ ಮಾತನಾಡಿ,



ಥಿಯಾಸೋಫಿಕಲ್ ಸೊಸೈಟಿಯು ಸ್ಥಾಪನೆಯಾಗಿ 150 ವರ್ಷ ತುಂಬಿದ್ದು 80 ರಾಷ್ಟ್ರಗಳಲ್ಲಿ ಸಂಸ್ಥೆಗಳನ್ನು ಹೊಂದಿ ಕಾರ್ಯನಿರ್ವಹಿಸುತ್ತಿದೆ. ಕೆನಡಾದಲ್ಲಿ ನಡೆಯುತ್ತಿರುವ ಸಮ್ಮೇಳನವು 12ನೇಯದಾಗಿದೆ. ಈ ಸಮ್ಮೇಳನವು ಜುಲೈ 23 ರಿಂದ ಆರಂಭಗೊಳ್ಳಲಿದೆ. ಸಮ್ಮೇಳನದ ಪ್ರಮುಖ ಉದ್ದೇಶ ಆಧ್ಯಾತ್ಮಿಕ ಚಿಂತನೆ ಹಾಗೂ ಸಹೋದರತ್ವ ತತ್ವಗಳನ್ನು ಸಹಕಾರಗೊಳಿಸುವ ಮೂಲ ಆಶಯವನ್ನು ಹೊಂದಿದೆ. ಭಾರತದಿಂದ 92 ಮಂದಿ ಪ್ರತಿನಿಧಿಗಳು ಆಯ್ಕೆಗೊಂಡಿದ್ದು, ಈ ಪೈಕಿ ಕರ್ನಾಟಕದಿಂದ 16, ಜಿಲ್ಲೆಯಿಂದ ಇಬ್ಬರು ಆಯ್ಕೆಗೊಂಡಿದ್ದು ಇದರಲ್ಲಿ ನಾನು ಸೇರಿದ್ದೇನೆ ಎಂಬ ಹೆಮ್ಮೆ ನನಗಿದೆ ಎಂದರು.

ಹಿರಿಯ ವಕೀಲ ಜಯಪ್ಪ ಮಾತನಾಡಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿರುವ ಥಿಯಾಸೋಫಿಕಲ್ ಸೊಸೈಟಿಯ ಸಮ್ಮೇಳನದಲ್ಲಿ ನಮ್ಮ ಸಹಪಾಠಿ ಜನಾರ್ಧನ್ ಗುಪ್ತರವರು ಭಾಗವಹಿಸುತ್ತಿರುವುದು ನಮ್ಮೆಲ್ಲರಿಗೂ ಸಂತಸ ತಂದಿದೆ ಎಂದರು.

ವಕೀಲರ ಸಂಘದ ಅಧ್ಯಕ್ಷ ಪ್ರಶಾಂತ್ ಕುಮಾರ್ ಮಾತನಾಡಿ, ಇದೇ ಮೊದಲ ಬಾರಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿರುವ ಸಮ್ಮೇಳನದಲ್ಲಿ ನಮ್ಮ ಮಾರ್ಗದರ್ಶಕರು ಹಾಗೂ ಸಮಾಜಮುಖಿ ಚಿಂತಕ ಜನಾರ್ದನ ಗುಪ್ತ ಅವರು ಭಾಗವಹಿಸುತ್ತಿರುವುದು ವಕೀಲರ ಘನತೆಯನ್ನು ಹೆಚ್ಚಿಸಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ವಕೀಲರಾದ ಶಂಕರಯ್ಯ, ಬಿ.ಸಿ. ರಾಜೇಶ್, ಮಂಜುನಾಥ್, ರೇವಣ್ಣ, ವಿಜಯ್ ಕುಮಾರ್, ಜಗದೀಶ್, ದೊರೆಸ್ವಾಮಿ, ಸತೀಶ್, ನವೀನ್ ಇತರರು ಇದ್ದರು.

# ಮಾನಸಿಕ ನೆಮ್ಮದಿಗೆ ಪೂಜೆ ಪುನಸ್ಕಾರ ಸಹಕಾರಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ದೇವಾಲಯಗಳಲ್ಲಿ ಪೂಜೆ ಪ್ರಾರ್ಥನೆ ಸಲ್ಲಿಸುವುದರಿಂದ ಮಾನಸಿಕ ನೆಮ್ಮದಿ ಹೊಂದಿ ಸಾರ್ಥಕ ಜೀವನ ನಡೆಸಬಹುದಾಗಿದೆ ಎಂದು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ ಅಧ್ಯಕ್ಷೆ ಸಿ.ಎಂ. ಚಂಚಲ ಹೇಳಿದರು.

ಶುಕ್ರವಾರ ನಗರದ ಸಂಪೂರ್ಣ ಶಿಲಾಮಯ ಶ್ರೀ ಕ್ಷೇತ್ರ ಕಾಳಿಕಾಂಬ ಕಮಠೇಶ್ವರ ದೇವಾಲಯದಲ್ಲಿ ಆಷಾಢ ಶುಕ್ರವಾರದ ಕೊನೆಯ ವಾರದ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಜೀವನದ ಸುಪ್ತ ಬೇಗುದಿಗಳನ್ನು ದೇವರ ಮೊರೆ ಹೋಗಿ ಶುದ್ಧ ಮನಸ್ಸಿನಿಂದ ನಿವೇದಿಸಿಕೊಂಡಾಗ ಆತ್ಮಸ್ಥೈರ್ಯ ಹೊಂದಿ ಸಂಕಲ್ಪಿತ ಗುರಿ ಸಾಧಿಸಿ ಅದಮ್ಯ ಉತ್ಸಾಹದಿಂದ ಜೀವನ ಸಾಗಿಸಬಹುದೆಂದರು.

ಕಾಳಿಕಾಂಬ ದೇವಾಲಯದ ಶಿಲ್ಪಕಲಾ ಸೌಂದರ್ಯ ಬಹುಜನರನ್ನು ಸೆಳೆಯುತ್ತಾ ಜಿಲ್ಲೆಯ ಹೆಮ್ಮೆಯ ಧಾರ್ಮಿಕ ಮತ್ತು ಪ್ರವಾಸೋದ್ಯಮ ಕ್ಷೇತ್ರವಾಗಿದೆ ಎಂದು ಅವರು ಹರ್ಷ ವ್ಯಕ್ತಪಡಿಸಿದರು.

ವಾರದ ವಿಶೇಷ ಪೂಜಾ ಸೇವಾರ್ಥದಾರರಾದ ಸಿ.ಎಂ. ಚಂಚಲ, ಹೆಚ್. ಕೆ. ಶ್ರೀಕಂಠಮೂರ್ತಿ ಮತ್ತು ರಂಗಪೂಜಾ ಸೇವಾರ್ಥದಾರರಾದ ಕೆ.ಆರ್. ಕುಮಾರ್ ದಂಪತಿಗೆ ಗೌರವಿಸಲಾಯಿತು.

ಸಂಗೀತ ವಿದುಷಿ ಗೀತಾ ಭಟ್ ತಂಡ ಭಜನಾ ಸೇವೆ ಸಲ್ಲಿಸಿದರು. ಜಿಲ್ಲಾ ವಿಶ್ವಕರ್ಮ ಸಮಾಜದ ಅಧ್ಯಕ್ಷ ಹೆಚ್.ವಿ. ಹರೀಶ್, ದೇವಾಲಯದ ಪೂಜಾ ಸಮಿತಿಯ ಅಧ್ಯಕ್ಷ ಹೆಚ್.ಕೆ. ಆನಂದ್, ತಾಲ್ಲೂಕು ವಿಶ್ವಕರ್ಮ ಸಮಾಜದ ಉಪಾಧ್ಯಕ್ಷ ಎ. ಬ್ಯಾಟರಂಗಾಚಾರ್, ಪ್ರಮುಖರಾದ ಹೆಚ್.ಎಸ್. ಆನಂದ್, ಎಂ.ಟಿ. ಸುರೇಶ್, ಪಿ.ಟಿ. ಗೋಪಾಲ್, ಹೆಚ್.ಎನ್. ಲಕ್ಷ್ಮಿಕಾಂತ್, ರುಕ್ಮಾಂಗದಚಾರ್ ಮತ್ತಿತರರು ಹಾಜರಿದ್ದರು.

# ದೊಡ್ಡ ಮನಸ್ಸು



– ರಜನೀಶ್ ಸಾಗರ

ತುರ್ತಾಗಿ ಬಾಡಿಗೆ ಮನೆ ಹುಡುಕಾಟ ನಡೆದಿತ್ತು. ನಮ್ಮ ತುರ್ತಿಗೆ, ಅವಶ್ಯಕತೆಗನುಗುಣವಾಗಿ ಮನೆ ಸಿಕ್ಕಿದ್ದು ಹೊಸದಾಗಿ ರೂಪುಗೊಂಡ ಬಡಾವಣೆಯಲ್ಲಿ. ಹೊಸ ಬಡಾವಣೆಯಾದ್ದರಿಂದ ರಸ್ತೆಗಳಾಗಲಿ, ಬೀದಿ ದೀಪಗಳಾಗಲಿ ಚರಂಡಿಗಳಾಗಲಿ ಏನೇನೂ ಇರಲಿಲ್ಲ. ಮಣ್ಣಿನ ದಾರಿ ಸಂಜೆಯಾದರೆ ಗವ್ವೆನ್ನುವ ಕತ್ತಲು, ಯಾವುದೇ ಮೂಲಭೂತ ವ್ಯವಸ್ಥೆಗಳು ಇಲ್ಲದ್ದರಿಂದ ನಾವು ಬಾಡಿಗೆಗೆ ಬಂದ ಮನೆ, ಮತ್ತೊಂದು ಮನೆ ಕೊಂಚ ದೂರದಲ್ಲಿತ್ತು. ಒಟ್ಟೇ ಎರೆಡೇ ಎರಡು ಮನೆಗಳು. ಮನೆಯಲ್ಲಿ ಒಬ್ಬರೇ ಇರಲು ಭಯವಾಗುವಂತಹ ಜಾಗ.

ಕಾಲ ಕಳೆದಂತೆ ನಾವು ಅದೇ ಜಾಗದಲ್ಲಿ ನಿವೇಶನ ಕೊಂಡು, ಮನೆ ಕಟ್ಟುವ ವೇಳೆಗೆ ಹತ್ತಾರು ಮನೆಗಳಾಗಿದ್ದವು. ಬಡಾವಣೆಯ ಕೆಲವು ಮಣ್ಣಿನ ದಾರಿಗಳು ಡಾಂಬಾರು ಕಂಡವು. ಬಡಾವಣೆಯ ತುಂಬಾ ಬೀದಿದೀಪದ ವ್ಯವಸ್ಥೆಯಾಗತೊಡಗಿತು. ಸದ್ಯಕ್ಕೆ ನಮ್ಮ ಮನೆಯ ಬಳಿ ಒಂದು ವಿದ್ಯುತ್ ಕಂಬ ನಿಲ್ಲಿಸಿದರು. ನಾನು ಪವರಮೆನ್‌ಗಳ ಸಹಾಯದಿಂದ ಕೊಂಚ ಹಣ ಖರ್ಚು ಮಾಡಿ, ಬೀದಿ ದೀಪ ಹಾಕಿಸಿದೆ. ಇದನ್ನು ನಾನು ಸಂಜೆ ಸ್ವಿಚ್ ಹಾಕುವುದು ಮತ್ತು ಬೆಳಗಾದರೆ ಸ್ವಿಚ್ ಆಫ್ ಮಾಡುತ್ತಿದ್ದೆ. ನಮ್ಮ ಮನೆ ಉಳಿದಂತೆ ಇನ್ನುಳಿದ ಕಡೆ ಬೀದಿ ದೀಪದ ವ್ಯವಸ್ಥೆ ಆಗಬೇಕಾಗಿತ್ತು. ಕೊನೆಗೆ ನಮ್ಮ ಮನೆಯ ಬೀದಿಗೆ ಏಳೆಂಟು ವಿದ್ಯುತ್ ಕಂಬಗಳನ್ನು ನಿಲ್ಲಿಸಿ, ಅವುಗಳಿಗೆ ಟ್ಯೂಬ್ ಲೈಟ್‌ಗಳನ್ನು ಹಾಕಿ, ಅವುಗಳು ಆನ್ ಮತ್ತು ಆಫ್ ಆಗುವ ಸಂಪರ್ಕವನ್ನು ನಮ್ಮ ಮನೆಯ ವಿದ್ಯುತ್ ಕಂಬದ ಸ್ವಿಚ್‌ಗೆ ಕೊಡಲಾಯಿತು.

ಪ್ರತಿದಿನ ಆನ್ ಆಫ್ ಮಾಡುತ್ತಿದ್ದೆ, ಇಡೀ ಬೀದಿ ಬೆಳಕು ಕಾಣುತಿತ್ತು. ಸಂಜೆಯ ವೇಳೆ ಆನ್ ಮಾಡುವುದು ಮರೆತರೆ ಬೀದಿಯವರೊಬ್ಬರು ದೂರವಾಣಿ ಕರೆ ಮಾಡಿ, ತಿಳಿಸುತ್ತಿದ್ದರು. ಒಮ್ಮೊಮ್ಮೆ ನಾನು ಮನೆಯಲ್ಲಿಲ್ಲದ ವೇಳೆ ಯಾರೂ ಆನ್ ಮಾಡುವ ಕೆಲಸಕ್ಕೆ ಕೈ ಹಾಕುತ್ತಿರಲಿಲ್ಲ. ಬೀದಿ ಕತ್ತಲೆಯಲ್ಲಿ ಕಳೆದು ಹೋಗುತಿತ್ತು. ಒಮ್ಮೆ ನಾನು ದೂರದ ಊರಿಗೆ ಹೋದಾಗ ಸಂಜೆ ದೀಪ ಹಾಕಿಲ್ಲ ಅನ್ನುವ ದೂರವಾಣಿ ಕರೆ ಬಂತು, ಆಗ ನಾನು, ನಮ್ಮ ಪಕ್ಕದ ಮನೆಯವರಿಗೆ ಹೇಳಿ, ಒಂದತ್ತು ಹೆಜ್ಜೆ ಬಂದು ಹಾಕಿ ಹೋಗತಾರೆ ಅಂದೆ. ಕರೆ ಮಾಡಿದವರು ಹೇಳಿದ ಮಾತು ಕೇಳಿ ನನಗೆ ಕರೆಂಟ್ ಹೊಡೆದಂತಾಯಿತು. ಪಕ್ಕದ ಮನೆಯವರಿಗೆ ಹೇಳಿದೆ ಅವರು ಆನ್ ಮಾಡಿದರೆ ಕರೆಂಟ್ ಹೊಡೆಯುವ ಸಂಭವ ಇದೆ, ನಾನು ಆನ್ ಮಾಡುವುದಿಲ್ಲ ಅಂದರಂತೆ. ನೀವಾದರೂ ಆನ್ ಮಾಡಬಹುದಿತ್ತಲ್ಲ ಸರ್? ಇಲ್ಲ ನಂಗೂ ಅದೇ ಭಯ ಅಂದರು! ಅಂದರೆ ನನಗೆ ಕರೆಂಟ್ ಹೊಡೆದರೆ ಹೊಡೆಯಲಿ, ನಮಗ್ಯಾಕೆ ಅದರ ಉಸಾಬರಿ!!! ಬಹಳ ದೊಡ್ಡ ಮನಸ್ಸು ನಮ್ಮ ಬೀದಿಯವದ್ದು. ಇಂದಿಗೂ ನಾನೇ ಆನ್ ಮಾಡುತ್ತೇನೆ. ನಾನು ಇಲ್ಲ ಅಂದರೆ ಮಾತ್ರ ನಮ್ಮ ಬೀದಿಯ ದೊಡ್ಡ ಮನಸ್ಸುಗಳ ಕಾರಣ ಬೀದಿ ಕತ್ತಲೆಯಲ್ಲಿ ಕೊಳೆಯುತ್ತೆ.

# ಸಂಭ್ರಮದ ಅನ್ನಪೂರ್ಣೇಶ್ವರಿ ಮಹಾ ರಥೋತ್ಸವ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿ ಕಲ್ಲೇನಹಳ್ಳಿ ಒಳನಾಡು ಅನ್ನಪೂರ್ಣೇಶ್ವರಿ ದೇವಿಯ ಮಹಾರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು. ನಿಸರ್ಗ ರಮಣೀಯ ತಾಣದಲ್ಲಿ ನೆಲೆಸಿರುವ ಅನ್ನಪೂರ್ಣೇಶ್ವರಿ ದೇವಾಲಯದಲ್ಲಿ ರಥೋತ್ಸವದ ಪೂಜಾ ವಿಧಿವಿಧಾನಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸಲಾಯಿತು.

ಮಂಗಳವಾದ್ಯ ಸಹಿತ ಸುಪ್ರಭಾತ, ಮಹಾಭಿಷೇಕ, ರಥಸಂಪ್ರೋಕ್ಷಣೆ ಪರಿವಾರ ದೇವತೆಗಳ ಸಮೇತ ಆದಿಶಕ್ತ್ಯಾತ್ಮಕ ಶ್ರೀ ಅನ್ನಪೂರ್ಣೇಶ್ವರಿ ಮೂಲಮಂತ್ರ ಹೋಮ, ಪೂರ್ಣಾಹುತಿ, ಸುವಾಸಿನಿಯರಿಂದ ಸಹಸ್ರನಾಮ ಪಾರಾಯಣ ಅರ್ಚನೆಯೊಂದಿಗೆ ಆರಂಭಗೊಂಡ ಜಾತ್ರಾ ಮಹೋತ್ಸವದಲ್ಲಿ ಅಮ್ಮನವರಿಗೆ ವಿಶೇಷ ಹೂವಿನ ಅಲಂಕಾರ ಮಾಡಿ ಉತ್ಸವ ಮೂರ್ತಿಯನ್ನು ಛತ್ರಿ ಚಾಮರದೊಂದಿಗೆ ತರಲಾಯಿತು. ನಂತರ ಅಲಂಕೃತ ರಥದಲ್ಲಿ ಸ್ಥಾಪಿಸಿ ಮಹಾಮಂಗಳಾರತಿ ನಂತರ ಭಕ್ತರು ರಥವನ್ನು ಎಳೆದು ಪುನೀತರಾದರು.

ದೇವರಿಗೆ ಫಲ, ಪುಷ್ಪಾದಿ ಅರ್ಚನೆ ಮಾಡುವ ಜತೆಗೆ ತಾವು ತಂದಿದ್ದ ಬಾಳೆಹಣ್ಣು, ಹೂವನ್ನು ಬ್ರಹ್ಮರಥಕ್ಕೆ ಎಸೆದರು. ರಥದ ಚಕ್ರಕ್ಕೆ



> ಒಳನಾಡು ಅನ್ನಪೂರ್ಣೇಶ್ವರಿ ಅಂದ್ರೆ ಬೇಡಿದ್ದನ್ನ ಕರುಣಿಸೋ ಮಹಾತಾಯಿ. ಹೀಗಾಗೇ ವರ್ಷಪೂರ್ತಿ ಭಕ್ತರ ದಂಡೇ ದೇಗುಲಕ್ಕೆ ಹರಿದುಬರುತ್ತೆ. ಅದ್ರಲ್ಲೂ ವರ್ಷಕ್ಕೊಮ್ಮೆ ಜರುಗುವ ಮಹಾ ರಥೋತ್ಸವವಂತೂ ನೋಡುವುದೇ ಚೆಂದ. ಮನದ ತುಂಬೆಲ್ಲಾ ಜಗನ್ಮಾತೆಯ ಧ್ಯಾನ. ಹೆಜ್ಜೆ ಹೆಜ್ಜೆಗೂ ಭಕ್ತಿಯ ಪುಳಕ. ಗಂಟೆನಾದದ ಜೊತೆ ಸ್ವರಗಳ ನಾದ. ಸರ್ವಾಲಂಕಾರಗಳಿಂದ ಅಮ್ಮನ ತೇರು ಮುಂದೆ ಬರುತ್ತಿದ್ದರೆ ಮೈಮನ ರೋಮಾಂಚನಗೊಂಡಿತ್ತು. ಎಲ್ಲರ ಮನದಲ್ಲೂ ಆಧ್ಯಾತ್ಮದ ಭಾವ ಮೂಡಿತ್ತು.
>
> **– ಎಸ್. ಸುದರ್ಶನ ಶರ್ಮ, ಪ್ರಧಾನ ಅರ್ಚಕ**

ತೆಂಗಿನಕಾಯಿ ಒಡೆದು ಕೆಲವು ಭಕ್ತರು ಹರಕೆ ತೀರಿಸಿದರು. ಮಂಗಳವಾದ್ಯ ಚಾಮುಂ ಕುಣಿತ ಪ್ರದರ್ಶನ ರಥೋತ್ಸವಕ್ಕೆ ಮೆರುಗು ನೀಡಿತು. ಪ್ರಧಾನ ಅರ್ಚಕರಾದ ವೇದಮೂರ್ತಿ ಎಸ್. ಸುದರ್ಶನಶರ್ಮ ಮಹಿಳೆಯರಿಗೆ ಅರಿಶಿಣ, ಕುಂಕುಮ, ಬಳೆ, ಮಂಗಳ ದ್ರವ್ಯ ವಿತರಿಸಿದರು.

ಅನ್ನಪೂರ್ಣೇಶ್ವರಿಯ ಕೃಪೆಗೆ ಪಾತ್ರರಾದವರಿಗೆ ಜೀವನದುದ್ದಕ್ಕೂ ಅನ್ನ ಸಿಗುತ್ತದೆ ಎಂಬ ನಂಬಿಕೆ ಭಕ್ತರಲ್ಲಿದೆ. ಹೀಗಾಗಿ ವರ್ಷವಿಡೀ ಒಳನಾಡಿನಲ್ಲಿ ಭಕ್ತರ ಸಂದಣಿ ಇದ್ದೇ ಇರುತ್ತದೆ. ಪ್ರತಿ ವರ್ಷ ಆಷಾಢ ಮಾಸದ ಕಡೆ ಶುಕ್ರವಾರ ಅಭಿಜಿನ್ ಮಹೂರ್ತದಲ್ಲಿ ಬ್ರಹ್ಮರಥೋತ್ಸವ ನಡೆಸಲಾಗುತ್ತದೆ. ಆಷಾಢ ಮಾಸದ ಪ್ರತಿ ಶುಕ್ರವಾರ ನಡೆಯುವ ಈ ವಾರ್ಷಿಕ ಆಚರಣೆಯಲ್ಲಿ ಜಿಲ್ಲೆಯ ಮೂಲೆ ಮೂಲೆಗಳಿಂದ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು. ರಥೋತ್ಸವದ ಪ್ರಯುಕ್ತ ಅನ್ನಪೂರ್ಣೇಶ್ವರಿಗೆ ವಿಶೇಷ ಅಲಂಕಾರ ಮಾಡಲಾಗಿದ್ದು, ವಿಶೇಷ ಪೂಜೆಯನ್ನ ಸಲ್ಲಿಸಲಾಯಿತು. ಸಾವಿರಾರು ಭಕ್ತರು ಪ್ರಾರ್ಥನೆ ಮಾಡಿ ರಥವನ್ನ ಎಳೆದು ಭಕ್ತಿ ಸಮರ್ಪಿಸಿದರು.

# ಗೋಪುರ, ತೋರಣ ಮತ್ತು ರಾಟೆ



– ಹರೀಶ್ ಗಂಗಾಧರ್

ಲಡಾಕ್ ಪ್ರಾಂತ್ಯದಲ್ಲಿ ನೀವು ಎಲ್ಲಿ ನೋಡಿದ್ರೂ ನಿಮಗೆ ಚೋರ್ಟೆನ್ಸ್ ಕಾಣಸಿಗುತ್ತವೆ. ಪ್ರತಿ ಹಳ್ಳಿಗೆ ಕಾಲಿಡುವ ಮುನ್ನ ಪ್ರವೇಶದಲ್ಲಿಯೇ ನಿಮಗೆ ಚದುರಂಗದಾಟದ ದೈತ್ಯ ಪಾನ್‌ಗಳ ಹಾಗೆ, ಇಲ್ಲಿನ ಪರ್ವತಗಳಂತೆ ಸಹಜವಾಗಿಯೇ ಭೂಮಿಯಿಂದ ಮೇಲಕೆದ್ದಿವೆ ಎನ್ನುವಂತೆ ಇವು ಕಾಣುತ್ತವೆ. ಸಾಮಾನ್ಯವಾಗಿ ಇಲ್ಲಿನ ಕಲ್ಲು ಮಣ್ಣು ಬಳಸಿ ಸುಮಾರು ಇಪ್ಪತ್ತು ಅಡಿಗಳಷ್ಟು ಎತ್ತರಕ್ಕೆ ಗೋಪುರ ಕಟ್ಟಲಾಗುತ್ತದೆ. ಸುಣ್ಣ ಬೆಳೆಯಲಾಗುತ್ತದೆ.

ಈ ಆಕೃತಿ ಬುದ್ಧನ ಮೂಲ ಸಂದೇಶವನ್ನು ಸಾರುತ್ತದೆ. ಗೋಪುರದ ನೆತ್ತಿಯಲ್ಲಿ ಅರ್ಧಚಂದ್ರನ ಮಡಿಲಲ್ಲಿ ಸೂರ್ಯನಿರುತ್ತಾನೆ. ಜಗತ್ತಿನಲ್ಲಿ ಎಲ್ಲವೂ ಒಂದಕ್ಕೊಂದು ಬೆಸೆದುಕೊಂಡಿವೆ. ನಾವು ಪ್ರತ್ಯೇಕವೆಂದು ಕಾಣುವ ಸೂರ್ಯ ಚಂದ್ರ ಕೂಡ ಒಂದಕ್ಕೊಂದು ಬೆಸೆದುಕೊಂಡಿವೆ. ಸಮಸ್ತವೂ ಒಂದೂ (ಟ್ಲಿಟ್ಲಿಥಿಶಿಅ),, ದ್ವೈತ ಎಂಬುದಿಲ್ಲ ಎಂದು ಈ ಆಕೃತಿಗಳು ಹಳ್ಳಿಗರಿಗೆ, ದಾರಿ ಹೋಕರಿಗೆ, ಅನಾಮಿಕರಿಗೆ ಸಾರುತ್ತದೆ.

ಲಡಾಕ್ ಪ್ರಾಂತ್ಯದಲ್ಲಿ ನಿಮಗೆ ಎಲ್ಲಡೆ ನೀಲಿ, ಬಿಳಿ, ಕೆಂಪು, ಹಸಿರು, ಹಳದಿ ಬಣ್ಣದ ತೋರಣಗಳು ಕಾಣಸಿಗುತ್ತವೆ. ಇವು ಪ್ರಾರ್ಥನಾ ತೋರಣಗಳು. ಇವು ಪಂಚ ಭೂತಗಳ ಪ್ರತೀಕ. ಬೀಸುವ ಗಾಳಿಗೆ ಪಟಪಟನೆ ಸದ್ದು ಮಾಡುತ್ತಲೇ ಇರುತ್ತವೆ. ಇವು ಎಂದಿಗೂ ಸ್ತಬ್ಧವಾಗಿರಬಾರದು, ನಿಶ್ಯಬ್ಧವಾಗಿರಬಾರದು ಏಕೆಂದರೆ ಇದು ಬರಿಯ ಸದ್ದಲ್ಲ ನಿರಂತರ ಎಲ್ಲೆಡೆ ಓಂ ಮಾಣಿ ಪದ್ಮೇ ಹಮ್ **Om Mani padme hum** ಪಸರಿಸುವ ಪ್ರಾರ್ಥನೆ . ಈ ತೋರಣಗಳು ಮಾಸಿದಾಗ ಅವುಗಳನ್ನು ಕಳಚಿ ಎಸೆಯದೆ ಮತ್ತದರ ಮೇಲೊಂದು ಹೊಸ ತೋರಣ ಕಟ್ಟುತ್ತಾರಂತೆ. ಇಲ್ಲಿ ಮಾಸುವುದು ಶುಭ ಸೂಚಕ! ಚೋರ್ಟನ್, ಪ್ರಾರ್ಥನಾ ತೋರಣಗಳ ಜೊತೆಗೆ ನನ್ನ ಗಮನ ಸೆಳೆದದ್ದು ಲಂಬವಾಗಿ ನಿಂತ ತಿರುಗುವ ಪ್ರಾರ್ಥನಾ ರಾಟೆಗಳು. ಇವುಗಳ ಮೇಲೂ ಬುದ್ಧನ ಸಂದೇಶವಿರುತ್ತದೆ. ಹೋಗಿ ಬರುವ ಜನರೆಲ್ಲಾ ಈ ರಾಟೆಗಳನ್ನು ತಿರುಗಿಸುತ್ತಾರೆ. ಬುದ್ಧನ ಸಂದೇಶ ಎಲ್ಲೆಡೆ ಹರಡಿ ಸಕಲ ಜನರ ಒಳಿತಾಗುತ್ತದೆ ಎಂಬುದು ಇಲ್ಲಿನ ಜನರ ನಂಬಿಕೆ.

# ಇತಿಹಾಸದಲ್ಲಿ ಈ ದಿನ

## ಜುಲೈ-20

1969: ಚಂದ್ರನ ಮೇಲೆ ಮಾನವನ ಮೊದಲ ಹೆಜ್ಜೆ: ಅಮೆರಿಕದ ಅಪೋಲೋ 11 ಯಾನದಿಂದ ನೀಲ್ ಆರ್ಮ್‌ಸ್ಟ್ರಾಂಗ್ ಚಂದ್ರನ ಮೇಲೆ ಕಾಲಿಟ್ಟ ಮೊದಲ ವ್ಯಕ್ತಿಯಾಗಿ ಇತಿಹಾಸ ಸೃಷ್ಟಿಸಿದರು.

1944: ನಾಜಿ ಗೆನರಲ್ ಕ್ಲೌಸ್ ವಾನ್ ಸ್ಟಾಫನ್‌ಬರ್ಗ್ ಆಪರೇಷನ್ ವಾಲ್ಕೈರಿ ಹೆಸರಿನಂತೆ ಹಿಟ್ಲರ್‌ನನ್ನು ಕೊಲ್ಲಲು ಯತ್ನಿಸಿದರು. ಆದರೆ ಯತ್ನ ವಿಫಲವಾಯಿತು.

1976: ವಿಕಿಂಗ್ 1 ಮಂಗಳ ಗ್ರಹದಲ್ಲಿ ಭೂಮಿಯೊಗ್ಯ ವಾತಾವರಣದ ಮೊದಲ ಚಿತ್ರ ಕಳಿಸಿತು.

1951: ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ (ಕಾಂಗ್ರೆಸ್) ಪಕ್ಷ ಚುನಾವಣಾ ಪ್ರಣಾಳಿಕೆಯನ್ನು ಪ್ರಕಟಿಸಿತು. ಇದು ಭಾರತದಲ್ಲಿ ನಡೆದ ಮೊದಲ ಸಾರ್ವಜನಿಕ ಚುನಾವಣೆಗಳಿಗೆ ಮೊದಲಿನ ಒಂದು ಪ್ರಮುಖ ಘಟನೆ.

### ಜನನ

356 ಬಿಸಿ: ಅಲೆಕ್ಸಾಂಡರ್ ದಿ ಗ್ರೇಟ್ ಗ್ರೀಕ್ ಸಾಮ್ರಾಟ.

1304: ಫ್ರಾಂಚೆಸ್ಕೋ ಪೆಟ್ರಾರ್ಕಾರ್ ಇಟಾಲಿಯನ್ ಕವಿ, ಮಾನವತಾವಾದದ ಪ್ರಭಾವಶಾಲಿ ವ್ಯಕ್ತಿ.

### ಮರಣ

1923: ಪಾನ್‌ಚೋ ವಿಲ್ಲಾ ಮೆಕ್ಸಿಕೋ ದೇಶದ ಪ್ರಸಿದ್ಧ ಕ್ರಾಂತಿಕಾರಿ ನಾಯಕ.

# ಅಪಾಯಕ್ಕೆ ಆಹ್ವಾನ ನೀಡುತ್ತಿವೆ ಕಬ್ಬಿಣದ ಶೀಟ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಪ್ರಮುಖ ರಸ್ತೆಗಳ ಮಳಿಗೆ, ಕಚೇರಿ ಹಾಗೂ ಮನೆಗಳ ಮುಂದೆ ಅಳವಡಿಸಿರುವ ಕಬ್ಬಿಣದ ಶೀಟ್‌ಗಳಿಂದ ಸಾರ್ವಜನಿಕರಿಗೆ ಭಾರೀ ತೊಂದರೆಯಾಗುತ್ತಿದೆ.

ಮಳೆ ಹಾಗೂ ಬಿಸಿಲಿನಿಂದ ರಕ್ಷಣೆ, ವಿದ್ಯುತ್ ಬಲ್ಬ್ ಹಾಕಲು ಮನೆಗಳ ಮುಂದೆ ಶೀಟ್‌ಗಳನ್ನು ಹಾಕಿದರೆ ಅಂಗಡಿಯವರು ಮಾರಾಟದ ವಸ್ತುಗಳನ್ನು ಜೋತು ಬಿಡಲು ರಸ್ತೆಗೆ ಹೊಂದಿಕೊಂಡಂತೆ ಹಾಕಿದ್ದಾರೆ. ಅದರಿಂದ ವಾಹನ ಸಂಚಾರಕ್ಕೆ ತೊಡಕಾಗಿದ್ದು ಇತ್ತೀಚೆಗೆ ಖಾಸಗಿ ಶಿಕ್ಷಣ ಸಂಸ್ಥೆಯ ಬಸ್‌ವೊಂದು ಡಿಕ್ಕಿಯಾಗಿ ವಿದ್ಯಾರ್ಥಿಗಳು ಗಾಯಗೊಂಡ ಘಟನೆ ನಡೆದಿದೆ. ಈ ಬಗ್ಗೆ ಕಠಿಣ ಕ್ರಮ ಕೈಗೊಳ್ಳಬೇಕಿದ್ದ ಮಹಾನಗರ ಪಾಲಿಕೆ ಹಾಗೂ ಪೊಲೀಸ್ ಇಲಾಖೆ ಜಾಣ ಮೌನ ವಹಿಸಿದೆ ಎಂಬ ಆರೋಪಗಳು ಸಾರ್ವಜನಿಕರಿಂದ ವ್ಯಕ್ತವಾಗಿದೆ.



## ಹಂಪ್ಸ್‌ಗಳಿಗೆ ಬಣ್ಣ ಬಳಿಯಿರಿ

ವಾಹನಗಳ ವೇಗದ ಚಾಲನೆಗೆ ಬ್ರೇಕ್ ಹಾಕುವ ಉದ್ದೇಶದಿಂದ ಸಾಲಗಾಮೆ, ಎಂ.ಜಿ. ಆರ್.ಸಿ. ರಸ್ತೆ, ಬಿ.ಎಂ. ರಸ್ತೆಯಲ್ಲಿ ಅಳವಡಿಸಿರುವ ಹಂಪ್ಸ್‌ಗಳಿಗೆ ಬಣ್ಣ ಬಳಿಯದೆ ಇರುವುದು ಸವಾರರ ಪ್ರಾಣಕ್ಕೆ ಸಂಚಕಾರ ತರುವಂತಾಗಿದೆ. ರಾತ್ರಿ ಹೊತ್ತು ವೇಗವಾಗಿ ಬರುವ ಬೈಕ್ ಸವಾರರು ಹಂಪ್ಸ್ ಕಾಣದೆ ಕೆಳಗೆ ಬಿದ್ದು ಗಂಭೀರ ಗಾಯಕ್ಕೆ ತುತ್ತಾಗುತ್ತಿದ್ದಾರೆ. ಬಿಎಂ ರಸ್ತೆಯಲ್ಲಿ ಇದೇ ಕಾರಣದಿಂದ ಇತ್ತೀಚೆಗೆ ಬೈಕ್ ಸವಾರನೊಬ್ಬ ಮೃತಪಟ್ಟಿದ್ದಾನೆ. ಪೊಲೀಸ್ ಹಾಗೂ ಮಹಾನಗರ ಪಾಲಿಕೆ ಅಧಿಕಾರಿಗಳು ಕಠಿಣ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

## ಶಾಲಾ ವಾಹನಗಳಿಗೆ ತೊಂದರೆ

ಖಾಸಗಿ ಶಾಲಾ ವಾಹನಗಳು ಬೆಳಿಗ್ಗೆ ಹಾಗೂ ಸಂಜೆ ಹೊತ್ತು ಹೆಚ್ಚಾಗಿ ನಗರದಲ್ಲಿ ಓಡಾಡುತ್ತವೆ. ಗಲ್ಲಿ ಹಾಗು ಮುಖ್ಯ ರಸ್ತೆಯಲ್ಲಿ ಸಂಚರಿಸಲು ಪರದಾಡಬೇಕಿದೆ. ಹರಸಾಹಸಪಟ್ಟು ಚಾಲಕರು ವಾಹನ ಓಡಿಸುತ್ತಾರೆಯಾದರೂ ರಸ್ತೆಗೆ ತಾಗುವಂತೆ ಅಳವಡಿಸಿರುವ ಶೀಟ್‌ಗಳು ಸಂಕಷ್ಟ ತಂದೊಡ್ಡುತ್ತಿವೆ. ಅನಗತ್ಯ ಶೀಟ್‌ಗಳನ್ನು ತೆರವುಗೊಳಿಸುವ ಅಥವಾ ರಸ್ತೆಗೆ ಚಾಚದಂತೆ ನೋಡಿಕೊಳ್ಳಬೇಕಿದೆ.

ವಿದ್ಯಾ ನಗರ, ಉದಯಗಿರಿ, ಪೆನ್ಷನ್ ಮೊಹಲ್ಲಾ, ಗೌರಿ ಕೊಪ್ಪಲು ಸೇರಿ ಪ್ರಮುಖ ರಸ್ತೆಗಳಲ್ಲಿ ಈ ರೀತಿಯ ಪರಿಸ್ಥಿತಿ ಕಾಣಬಹುದು. ಸಾರ್ವಜನಿಕ ರಸ್ತೆಯೂ ತಮ್ಮ ಸ್ವತ್ತು ಎಂಬಂತೆ ವರ್ತಿಸುವ ಮಳಿಗೆ ಹಾಗೂ ಮನೆ ಮಾಲೀಕರು ವಾಹನಗಳ ಓಡಾಟಕ್ಕೆ ಕಷ್ಟ ಎನ್ನುವಷ್ಟರ ಮಟ್ಟಿಗೆ ಶೀಟ್ ಅಳವಡಿಸಿದ್ದಾರೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248